[MADAM SPEAKER in the Chair.]

Notice of adjournment motion *re*: Mass Hunger Strike by the Workers of the Taivoc Watch Co , Dharwar.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನನಗೆ ಒಂದೆರಡು ನಿಮಿಷ ಮಾತನಾಡಲು ಅವಕಾಶ ಕೊಡುತ್ತೀರೆಂದು ನಂಬಿದ್ದೇನೆ. ನಾನು ಒಂದು ಅಡ್ಜರ್ನಮೆಂಟ್‌ಮೋಷನ್ ಕಳುಹಿಸಿದ್ದೇನೆ. ಆ ವಿಷಯ ಧಾರವಾಡದಲ್ಲಿರುವ ಟೈವಾಕ್ ಕೈ ಗಡಿಯಾರದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ 200 ಜನ ಕೆಲಸಗಾರರು ಮಾಸ್ ಹಂಗರ್ ಸ್ಟ್ರೈಕ್ ಮಾಡುತ್ತಿರುವುದಕ್ಕೆ ಸಂಬಂಧಪಟ್ಟದ್ದಾಗಿದೆ. ಎರಡು ತಿಂಗಳಿನಿಂದ ಏನನ್ನೂ ವಿಚಾರಣೆ ಮಾಡದೆ ಹಾಗೆ ಮ್ಯಾನೇಜ್‌ಮೆಂಟ್‌ನವರು ಸತಾಯಿಸುತ್ತಿದ್ದಾರೆ. 160 ಜನರನ್ನು ಈಗಾಗಲೇ ಕೆಲಸದಿಂದ ತೆಗೆದುಹಾಕಿದ್ದಾರೆ. ಆದ್ದರಿಂದ ಮಾಸ್ ಹಂಗರ್ ಸ್ಟ್ರೈಕ್ ಮಾಡುತ್ತಿದ್ದಾರೆ. ಈ ಗಡಿಯಾರದ ಕಾರ್ಖಾನೆಯ ವಿಚಾರ ಹೇಗೆ ಬಂತು ಎಂದರೆ, ಈ ಕಾರ್ಖಾನೆಯಲ್ಲಿ ಈ ಮಂತ್ರಿಮಂಡಲದ ಸದಸ್ಯರೊಬ್ಬರು ಷೇರ್ ಹೋಲ್ಡರ್ ಆಗಿದ್ದಾರೆ. ಆದ್ದರಿಂದ ಲಾಕ್ ಔಟ್ ಘೋಷಣೆಮಾಡಿಬಿಟ್ಟಿದ್ದಾರೆ. ಈ ಘೋಷಣೆ ಇಲ್ಲೀಗಲ್ ಎಂದು ಗೊತ್ತಾಗಿದ್ದರೂಈ ಲಾಕ್‌ಔಟನ್ನು ಮುಂದುವರಿಸುತ್ತಿದ್ದಾರೆ. ಮ್ಯಾನೇಜ್‌ಮೆಂಟಿನವರ ಉದ್ಧಟತನದಿಂದ ಲಾಕ್‌ಔಟನ್ನು ಲಿಫ್ಟ್ ಮಾಡುತ್ತಿಲ್ಲ. ಸರ್ಕಾರದ ಡೈರೆಕ್ಷನ್ ಇದ್ದರೂ ಕೂಡ ಅದನ್ನು ಡಿಸ್‌ಓಬೆ ಮಾಡುತ್ತಿದ್ದಾರೆ ಮಹಾರಾಷ್ಟ್ರದ ದೊಡ್ಡ ಕಂಪೆನಿಯಾದ ಲಾಲ್‌ಚಂದ್ ಗ್ರೂಪ್ ಇವರು ಇವರ ಜೊತೆಗೆ ಕಾರ್ಖಾನೆಯ ಷೇರ್ ಹೋಲ್ಡರ್ ಆಗಿರುವವರು. ಈ ದೃಷ್ಟಿಯಿಂದ ಎರಡು ತಿಂಗಳಿಂದ ಸ್ಟ್ರೈಕ್ ನಡೆಯುತ್ತಿದೆ ಇಲ್ಲಿ ಕೆಲಸ ಮಾಡುತಕ್ಕಂಥ ಜನರಲ್ಲಿ ಹೆಣ್ಣು ಮಕ್ಕಳೂ ಇದ್ದಾರೆ ಕಾರ್ಖಾನೆಯ ಸುಮಾರು 60 ಜನ ಹಂಗರ್ ಸ್ಟ್ರೈಕ್ ಮಾಡುತ್ತಿರುವವರಲ್ಲಿ ಹೆಣ್ಣು ಮಕ್ಕಳೂ ಇದ್ದಾರೆ. 24 ಗಂಟೆ ನಡೆದಂಥ ಹಂಗರ್ ಸ್ಟ್ರೈಕ್ ಮುಗಿದು ಈಗ ಮಾಸ್ ಹಂಗರ್ ಸ್ಟ್ರೈಕ್ ನಡೆಯುತ್ತಾ ಇದೆ. ನನಗೆ ಈಗ ತಾನೆ ಟೆಲಿಗ್ರಾಮ್ ಬಂದಿದೆ. ಅದನ್ನು ತಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ. ಈ ಮ್ಯಾನೇಜ್‌ಮೆಂಟಿನವರನ್ನು ಕಂಟ್ರೋಲ್ ಮಾಡುವುದಕ್ಕೆ ಸರ್ಕಾರ ಏಕೆ ಕ್ರಮ ತೆಗೆದುಕೊಂಡಿಲ್ಲ. ಲಾಕ್ ಔಟ್ ಲಿಫ್ಟ್ ಮಾಡಬೇಕೆಂದರೂ ಕೂಡ ಏತಕ್ಕೆ ಲಾಕ್‌ಔಟ್ ಲಿಫ್ಟ್ ಮಾಡಲಿಲ್ಲ? ಲಾಕ್‌ಔಟ್ ಮಾಡಿ ಅಲ್ಲಿದ್ದ ಕೆಲಸಗಾರರನ್ನು ಬಿಟ್ಟು ಬೇರೆಯ ಜನರಿಗೆ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಹೆಣ್ಣು ಮಕ್ಕಳನ್ನು ದಬ್ಬುವುದು, ಪೋಲೀಸ್ ಬಂದೋಬಸ್ತು ಹಾಕುವುದು ಅಮೇಲೆ ಕೆಲವರುಗಳನ್ನು ಹೊಡೆಯುವುದು ಈ ರೀತಿ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ದಯಮಾಡಿ ಸಂಬಂಧಪಟ್ಟ ಮಂತ್ರಿಗಳು ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕು. ಇದು ಬಹಳ ಪ್ರಾಮುಖ್ಯವಾದ ವಿಷಯವಾದ್ದರಿಂದ ಇದರ ಬಗ್ಗೆ ನಿಲುವಳಿ ಸೂಚನೆಯನ್ನು ತಂದಿದ್ದೇನೆ. ಅನೇಕ ಜನ ಸದಸ್ಯರು ಈ ವಿಷಯದ ಬಗ್ಗೆ ಹೇಳಬೇಕಾಗಿದೆ. ಆದ್ದರಿಂದ ಇದರ ಬಗ್ಗೆ ಚರ್ಚೆಗೆ ಅನುಮತಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ನಿಲುವಳಿ ಸೂಚನೆಯನ್ನು ಡಿಸ್‌ಅಲೋ ಮಾಡಿದ್ದೇನೆ ಎಂದು ತಮಗೆ ಆಗಲೇ ತಿಳಿಸಿದ್ದೇನೆ. ಈ ವಿಚಾರವನ್ನು ನೋಡಿಕೊಳ್ಳುವುದಕ್ಕೆ ಲೇಬರ್ ಡಿಪಾರ್ಟ್‌ಮೆಂಟ್ ಇದೆ. ಆದ್ದರಿಂದ ಅನುಮತಿ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಲಾಕ್‌ಔಟ್ ಮಾಸ ಹಂಗರ್ ಸ್ಟ್ರೈಕ್ ಆದಾಗ ಅಡ್ಜರ್ನಮೆಂಟ್ ಮೋಷನ್ ಇಲ್ಲ ತರುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದೀರಿ. ಆದರೆ ಆ ರೀತಿ ಚರ್ಚೆಗೆ ಬಂದಿರುವುದು ರೆಕಾರ್ಡಿನಲ್ಲಿದೆ. ಆದುದರಿಂದ ತಾವು ತಮ್ಮ ತೀರ್ಮಾನವನ್ನು ರಿವೈಸ್ ಮಾಡಿ, ಈ ಅಡ್ಜರ್ನಮೆಂಟ್ ಮೋಷನ್ ಅಲೋ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ನಿಲುವಳಿ ಸೂಚನೆಗೆ ಅನುಮತಿ ಕೊಡುವುದಕ್ಕಾಗುವುದಿಲ್ಲ.

Sri C. M. ARUMUGAM.—We only appeal to you to reconsider the matter. This is a very important matter because the management has already terminated the services of 160 workers and they have begun recruiting fresh people to fill their places.

MADAM SPEAKER.—There is ample scope for the Hon'ble Member to discuss the matter at a later stage. Let us take the next item on the agenda.

Now we shall take up further discussion on the Resolution moved by Sri T. R. Shamanna.

Mysore Land Reformes (Second Amendment and Miscellaneous Provision) Bill 1972

(*i*) Statutory Resolution to disallow Mysore Ordinance No. 1 of 1972

(*ii*) Motion to Consider the Bill.

ಶ್ರೀ ಟಿ. ಆರ್. ಶಾಮಣ್ಣ (ಕೋಚೆ).—ಮಾನ್ಯ ಅಧ್ಯಕ್ಷಣಿಯವರೇ, ಈ ದಿನ ಮೈಸೂರು ರಾಜ್ಯ.....

† Sri C. M. ARMUGAM.—The measure brought forward by the Government is a progressive one. This legislation is going to help thousands of people. I request Sri Shamanna through you Madam Speaker, to withdraw his amendment. The Government could not implement the provisions of the Bill because of the adoption of an amendment moved by the Opposition in the Legislative Council. Let us not put obstacles in the way of the Government in getting the Bill passed once again. Let it not appear to the Government or the Ruling Party that the Opposition is putting obstacles in the passage of the Bill. I only request Sri Shamanna to please withdraw his amendment. The amendment proposed by Sri Shamanna is of a conservative type. I am not going to be a party to his amendment. We must accept the progressive measure brought forward by the Government, and we must allow the Government to implement it. On behalf of the entire Opposition I appeal to Sri Shamanna to withdraw his amendment.

Sri D. DEVARAJ URS.—I join with Sri C. M. Armugam in his pleadings with Sri Shamanna to withdraw his amendment.

Sri C. M. ARUMUGAM.—Inspite of my pleadings, if Sri Shamanna were to go on with his speech, I will have to perform the unpleasant task of opposing his amendment. I do not want to be a party to such an amendment.

† Sri T. R. SHAMANNA.—I will not come in the way of Sri Armugam either to support my amendment or to reject it.

ಈ ದಿನ ಸಭೆಯ ಮುಂದೆ ನಾನು ತಂದಿರತಕ್ಕ ನಿರ್ಣಯ, ಮೈಸೂರು ರಾಜ್ಯದ ರಾಜ್ಯ ಪಾಲರು 1972ನೆಯ ಇಸವಿ ಮೇ 10ರಂದು ಹೊರಡಿಸಿರುವ 1972ನೇ ಇಸವಿಯ 1ನೇ ಕ್ರಮಾಂಕದ ಅದ್ಯಾದೇಶವನ್ನು ಅಂದರೆ ಮೈಸೂರು ರಾಜ್ಯದ ಭೂಸುಧಾರಣಾ ತಿದ್ದುಪಡಿ ಹಾಗೂ ವಿವಿಧ ಬಾಬುಗಳಿಗೆ ಸಂಬಂಧಿಸಿದ ಅದ್ಯಾದೇಶಕ್ಕೆ ಈ ಸಭೆ ಅಸಮಾಧಾನವನ್ನು ಸೂಚಿಸುತ್ತದೆ ಎಂಬುದು. ಅದನ್ನು ಸಮರ್ಥಿಸುತ್ತಾ ಎರಡು ಮಾತುಗಳನ್ನು ಆಡುವುದಕ್ಕೆ ತಾವು ಅವಕಾಶ ಕೊಟ್ಟಿರುವುದ